ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಮಸಾಸಂಇ : ಉ ನಿ : ಸುಮಪ : 2019–20 : ದಿನಾಂಕ: 28–11–2019

**ಪತ್ರಿಕಾ ಪ್ರಕಟಣೆ**

# ತುಮಕೂರು ಸ್ಮಾರ್ಟ್ ಸಿಟಿ ಲಿಮಿಟೆಡ್ ಮತ್ತು ಆಲ್‌ಬೋರ್ಗ್ ಸ್ಮಾರ್ಟ್ ಸಿಟಿ ಡೆನ್ಮಾರ್ಕ್ ನಡುವೆ ಸಹಭಾಗಿತ್ವದ ಒಡಂಬಡಿಕೆ ಸಹಿ

ಬೆಂಗಳೂರು, ನವೆಂಬರ್ 28 (ಕರ್ನಾಟಕ ವಾರ್ತೆ)

ಬೆಂಗಳೂರು ನಗರದ ಮೇಲಿನ ಒತ್ತಡವನ್ನು ಕಡಿಮೆ ಮಾಡುವಲ್ಲಿ ತುಮಕೂರು ನಗರದ ಸರ್ವತೋಮುಖ ಬೆಳವಣಿಗೆಗೆ ಈ ಸಹಭಾಗಿತ್ವಕ್ಕಡ ಸಹಕರಿಸುತ್ತದೆಯೆಂಬ ಆಶಾಭಾವನೆಯನ್ನು ತುಮಕೂರು ಜಿಲ್ಲಾ ಉಸ್ತುವಾರಿ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರಾದ ಸಚಿವ ಮಾಧುಸ್ವಾಮಿ ವ್ಯಕ್ತಪಡಿಸಿದರು

ವಿಧಾನಸೌಧದಲ್ಲಿ ನಡೆದ ತುಮಕೂರು ಸ್ಮಾರ್ಟ್ ಸಿಟಿ ಲಿಮಿಟೆಡ್ ಮತ್ತು ಆಲ್‌ಬೋರ್ಗ್ ಸ್ಮಾರ್ಟ್ ಸಿಟಿ ಡೆನ್ಮಾರ್ಕ್ ನಡುವೆ ಸಹಭಾಗಿತ್ವದ ಒಡಂಬಡಿಕೆ ಸಹಿ ಮಾಡುವ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು

ಈ ಒಡಂಬಡಿಕೆಯಲ್ಲಿ ನಿರ್ದಿಷ್ಟ ವಿಷಯಗಳಿಗೆ ಸಂಬಂಧಿಸಿದಂತೆ ಜ್ಞಾನದ ವಿನಿಮಯ, ಅಧ್ಯಯನ ಪ್ರವಾಸ ಹಾಗೂ ಕಾರ್ಯಾಗಾರಗಳ ಆಯೋಜನೆ. ಸ್ಮಾರ್ಟ್ ಸಿಟಿ ಯೋಜನಾ ಕ್ಷೇತ್ರದಲ್ಲಿ ಜಂಟಿಯಾಗಿ ಯೋಜನೆಗಳನ್ನು ರೂಪಿಸುವುದು, ಉನ್ನತ ಮಟ್ಟದ ಪ್ರತಿನಿಧಿಗಳೂ ಎರಡೂ ನಗರಗಳನ್ನು ಪರಸ್ಪರ ಸಂದರ್ಶಿಸುವುದು,
ಆಲ್ ಬೋರ್ಗ್ ನಗರವು ತುಮಕೂರು ಸ್ಮಾರ್ಟ್ ಸಿಟಿ ಲಿಮಿಟೆಡ್ ಯೋಜನೆಗಳಿಗಾಗಿ ಆರ್ಥಿಕ ಸಹಾಯವನ್ನು ಒದಗಿಸುವ ಸಂಭಾವ್ಯ ಮೂಲಗಳನ್ನು ಗುರುತಿಸುವಲ್ಲಿ ಸಹಕಾರ ನೀಡುವುದು ಸೇರಿದೆ.

ಸಂಭಾವ್ಯ ಸಹಕಾರದ ವ್ಯಾಪ್ತಿಯು ಸ್ಮಾರ್ಟ್ ಶಿಕ್ಷಣ, ಡಿಜಿಟಲೀಕರಣ ಮತ್ತು ಶಕ್ತಿ ದಕ್ಷ ಉಪಕ್ರಮಗಳು; ನಗರ ನೀರು ನಿರ್ವಹಣೆ, ಸಾರಿಗೆ, ಹಸಿರು ಕಟ್ಟಡ ನಿರ್ಮಾಣದ ತಂತ್ರಜ್ಞಾನ, ಕಸ ನಿರ್ವಹಣೆ, ಆರೋಗ್ಯಕರ ಮತ್ತು ವಾಸಯೋಗ್ಯ ನಗರಗಳು, ಆರೋಗ್ಯ ಇ–ಆಡಳಿತ ಸಹ ಯೋಜನೆಯಲ್ಲಿ ಒಳಗೊಂಡಿರುತ್ತದೆ.

ಕಾರ್ಯಕ್ರಮದಲ್ಲಿ ಡೆನ್ಮಾರ್ಕ್ ದೇಶದ ರಾಯಭಾರಿ ಶ್ರೀ ಫ್ರೆಡ್ಡಿ ಸ್ವಾನೆ ಒದಂಬಡಿಕೆಗೆ ಸಹಿ ಹಾಕಿದರು ಯೋಜನೆ ಇಲಾಖೆ ಪ್ರಧಾನ ಕಾರ್ಯದರ್ಶಿಗಳಾದ ಡಾ. ಶಾಲಿನಿ ರಜನೀಶ್ ಸೇರಿದಂತೆ ನಗರಾಭಿವೃದ್ಧಿ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಹಾಗೂ ಇತರ ಗಣ್ಯರು ಉಪಸ್ಥಿತರಿದ್ದರು.
ಛಾಯಾಚಿತ್ರ ಲಗತ್ತಿಸಿದೆ)

## ವಿಜ್ಞಾನ ಪ್ರದರ್ಶನ

ಬೆಂಗಳೂರು, ನವೆಂಬರ್ 28 (ಕರ್ನಾಟಕ ವಾರ್ತೆ)

ಜವಾಹರ್ ಲಾಲ್ ನೆಹರು ತಾರಾಲಯ ಹಾಗೂ ಬೆಂಗಳೂರು ಅಸೋಸಿಯೇಷನ್ ಫಾರ್ ಸೈನ್ಸ್ ಎಜುಕೇಷನ್ ವತಿಯಿಂದ ನವೆಂಬರ್ 29 ರಿಂದ ಡಿಸೆಂಬರ್ 1 ರವರೆಗೆ ನಗರದ ಜವಾಹರ್ ಲಾಲ್ ನೆಹರು ತಾರಾಲಯದಲ್ಲಿ " ವಿಜ್ಞಾನ ಪ್ರದರ್ಶನ" ವನ್ನು ಹಮ್ಮಿಕೊಳ್ಳಲಾಗಿದೆ.

ಈ ಪ್ರದರ್ಶನದಲ್ಲಿ ಕ್ಲಾಡಿನಿ ಚಿತ್ರಗಳು, ಜ್ವಾಲೆಯಲ್ಲಿ ಸ್ಥಾಯೀ ತರಂಗಗಳು, ರಕ್ತವಲ್ಲ ರಾಸಾಯನಿಕ, ಕಾಂತೀಯ ವೇಗೋತ್ಕರ್ಷಕ – ಇನ್ನೂ ಮುಂತಾದ ಮಾದರಿಗಳು ಪ್ರದರ್ಶನದಲ್ಲಿರುತ್ತವೆ. ಪ್ರದರ್ಶನಕ್ಕೆ ಪ್ರವೇಶ ಉಚಿತವಿದ್ದು, ಮೊದಲು ಬಂದವರಿಗೆ ಆದ್ಯತೆ ನೀಡಲಾಗುವುದು.

ಆಕಾಶ ಮಂದಿರದ ಪ್ರದರ್ಶನಗಳಾದ 'ನಮ್ಮ ಸೌರವ್ಯೂಹ' ಮಧ್ಯಾಹ್ನ 12.30 ಮತ್ತು 2.30 ಗಂಟೆಗೆ ಹಾಗೂ 'ಬಾನಂಗಳದ ಬಾಣಬಿರುಸು' ಮಧ್ಯಾಹ್ನ 3.30 ಮತ್ತು ಸಂಜೆ 4.30 ಗಂಟೆಗೆ ಪ್ರದರ್ಶಿತಗೊಳ್ಳುತ್ತವೆ. ಪ್ರವೇಶ ದರ ವಯಸ್ಕರಿಗೆ ತಲಾ ರೂ 50/–. ಶಾಲಾ ಮಕ್ಕಳಿಗೆ ತಲಾ ರೂ 30/–.

ಹೆಚ್ಚಿನ ಮಾಹಿತಿಗಾಗಿ 080–22379725/22266084 ಅಥವಾ info@taralaya.org ಅನ್ನು ಸಂಪರ್ಕಿಸಬಹುದಾಗಿದೆ.

## ಪದ್ಮಶ್ರೀ ಕದ್ರಿ ಗೋಪಾಲನಾಥ್

### ಸ್ಮರಣಾಂಜಲಿ ಕಾರ್ಯಕ್ರಮ

ಬೆಂಗಳೂರು, ನವೆಂಬರ್ 28 (ಕರ್ನಾಟಕ ವಾರ್ತೆ)

ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ವತಿಯಿಂದ ಡಿಸೆಂಬರ್ 3 ರಂದು ಸಂಜೆ 5.00 ಗಂಟೆಗೆ ನಯನ ಸಭಾಂಗಣ, ಕನ್ನಡ ಭವನ, ಬೆಂಗಳೂರು ಇಲ್ಲಿ ಪದ್ಮಶ್ರೀ ಕದ್ರಿ ಗೋಪಾಲನಾಥ್ ಸ್ಮರಣಾಂಜಲಿ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ.

ಈ ಕಾರ್ಯಕ್ರಮದಲ್ಲಿ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಅಧ್ಯಕ್ಷ ಶ್ರೀ ಆನೂರು ಅನಂತಕೃಷ್ಣ ಶರ್ಮ ಅಧ್ಯಕ್ಷತೆ ವಹಿಸಲಿದ್ದಾರೆ.

ಈ ಸಂದರ್ಭದಲ್ಲಿ ಸಂಗೀತ ಕಲಾರತ್ನ ಪ್ರಿ ಮೈಸೂರು ವಿ. ಸುಬ್ರಮಣ್ಯ ಹಾಗೂ ಖ್ಯಾತ ಕೊಳಲು ವಾದಕ ಪ್ರವೀಣ್ ಗೋದಖಿಂಡಿ ಇವರಿಂದ  ನುಡಿ ನಮನ ನಡೆಯಲಿದೆ.

# KNOW YOUR STARS

**Bengaluru November 28, (Karnataka Information)**

Jawaharlal Nehru Planetarium and Bangalore Association for Science Education (BASE) announces a special demonstration lecture and sky gazing entitled KNOW YOUR STARS at the Jawaharlal Nehru Planetarium on 1st December (Sunday) at 6.30 PM Jawaharlal Nehru Planetarium, Sri T. Chowdaiah Road, High Grounds, Bengaluru – 560 001.

Ask an Astronomer is scheduled on 1st December 2019 between 5.15 PM and 6.15PM. Experts of the Planetarium will be available to answer and discuss your questions. Preferably, questions can be sent by email in advance. Entry is free.

Further details may be obtained from Jawaharlal Nehru Planetarium on 2237 9725/2226 6084 or visit our website http://www.taralaya.org/monthly-sky-chart.php.

## "Science in Action" an exhibition

**Bengaluru November 28, (Karnataka Information)**

**Jawaharlal Nehru Planetarium (JNP) and Bangalore Association for Science entitled "Science in Action" from 29th for November 2019.**

**The inauguration of the exhibition is by Prof. Shshi Thutupalli, National Centre for Biological Science and ICTS, Bengluru, on November 29th at 9.30 am.**

**Monthly programmes entitled Ask Astronomer and Know Your Starts are scheduled on 1st December 2019 says an official press release.**

## Memorandum of Understanding Signed between Tumakuru Smart City Limited and the City of Aalborg in Denmark

**Bengaluru November 28, (Karnataka Information)**

A Memorandum of Understanding was signed between Tumakuru Smart City Limited and the City of Aalborg Denamark in the presence of Honourable Tumakuru District in charge Minister Shri J.C. Maduswamy on 28-11-2019 at Vidhana Soudha, Bengaluru. On behalf of Tumkuru Smart City Limited, Dr. Shalini Rajneesh, I.A.S., the Chairperson of the Company, signed the MoU, while his Excellency Mr. Freddy Svane, Ambassador of Denmark signed on behalf of City of Aalborg.

The forms of Co-operation of this MoU consists of

- Exchange of knowledge, study tours and workshops related to specific topics
- Joint projects in the field of Smart City Solutions
- Mutual visits by high ranking representatives from both the cities.
- Aalborg city will also assist Tumakuru Smart City Limited in identifying potential sources of financial support for Smart solution projects.

The areas of potential co-operation are Smart Education; Digitilization & Efficient initiative, Urban Water Management, Transportation, Technology for Construction of green buildings, Water Management, Healthy and Liveable Cities, Health, and e-Governance.

The Honourable Minister, speaking on the occasion lauded the efforts of Tumakuru Smart City in this direction and hoped that the association will help in

overall development of  Tumkur as a edge city to reduce the pressure on Bangalore.

Dr, Shalini Rajneesh IAS, thanked the Hon'ble Minister Shri J.C. Madhuswamy for his presence in the signing unction and also thanked his Excellency Mr. Feddy Swane and his team.  She also thanked the  Additional Chief Secretary (Urban Development), Principal Secretary Urban Development for their guidance  and support.  She expressed that the mutual co-operation between the two cities will result in achieving the objective of this MOU.

## ಸಚಿವರ ಪ್ರವಾಸ

**ಬೆಂಗಳೂರು, ನವೆಂಬರ್ 28 (ಕರ್ನಾಟಕ ವಾರ್ತೆ)**

ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಹಾಗೂ ಕಾರ್ಮಿಕ  ಸಚಿವ ಸುರೇಶ್‌ಕುಮಾರ್ ಅವರು ನವೆಂಬರ್ 29 ರಂದು ಚಿತ್ರದುರ್ಗ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡು ಅಂದೇ ರಾತ್ರಿ ಕೇಂದ್ರಸ್ಥಾನಕ್ಕೆ ಹಿಂತಿರುಗುವರು.

## ಕೃಷಿ ಪದವಿಧರರಿಗೆ  ನೋಂದಣಿಗೆ  ಅರ್ಜಿ ಆಹ್ವಾನ

**ಬೆಂಗಳೂರು, ನವೆಂಬರ್ 28 (ಕರ್ನಾಟಕ ವಾರ್ತೆ)**

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರಿನ ವಿವಿಧ ಕೋರ್ಸ್‌ಗಳಲ್ಲಿ ಸ್ನಾತಕ/ಸ್ನಾತಕೋತ್ತರ/ಡಾಕ್ಟರೋಲ್ ಪದವಿ ಪಡೆದು ಐದು ವರ್ಷ ಪೂರೈಸಿದ ಪದವೀಧರರಿಂದ ನೋಂದಾಯಿತ ಪದವೀಧರರಾಗಿ ನೋಂದಣಿ ಮಾಡಿಸಿಕೊಳ್ಳಲು ಅರ್ಜಿಯನ್ನು ಆಹ್ವಾನಿಸಲಾಗಿದೆ.  ಅರ್ಜಿಗಳನ್ನು ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ವೆಬ್‌ಸೈಟ್ : **www.uasbangalore.edu.in** ನಿಂದ ಪಡೆದು ಡಿಸೆಂಬರ್ 1 ರಿಂದ 31 ನೇ ಡಿಸೆಂಬರ್ 2019 ರ ಒಳಗಾಗಿ, ಹಣಕಾಸು ನಿಯಂತ್ರಣಾಧಿಕಾರಿಗಳು, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ಇವರ ಹೆಸರಿನಲ್ಲಿ ಖರೀದಿಸಿದ ರೂ. 500/- ಗಳ ಡಿ.ಡಿ. ಯನ್ನು ಲಗತ್ತಿಸಿ ಭರ್ತಿಮಾಡಿದ ಅರ್ಜಿಯನ್ನು ಡಿಸೆಂಬರ್ 31, 2019 ರ ಒಳಗಾಗಿ ಕುಲಸಚಿವರ ಕಚೇರಿಗೆ ಸಲ್ಲಿಸುವುದು.  ಹೆಚ್ಚಿನ ವಿವರಗಳಿಗೆ ದೂರವಾಣಿ 080-23330984 / 23330149 ಗ ಸಂಪರ್ಕಿಸಲು ಪ್ರಕಟಣೆ ತಿಳಿಸಿದೆ.